# 2018 ರ ಆರ್ಥಿಕ ವರ್ಷದಲ್ಲಿ 1 ಲಕ್ಷ ಸೊನಾಲಿಕಾ ಟ್ರಾಕ್ಟರ್ ಮಾರಾಟ

## – ಕಂಪನಿ ಆರಂಭವಾದ 5 ವರ್ಷಗಳಲ್ಲಿ ಮಾರಾಟವನ್ನು ದ್ವಿಗುಣ, ಸಾಲ ಮುಕ್ತದ ಸಾಧನೆ

## – ಟ್ರಾಕ್ಟರ್ ತಯಾರಿಕೆಯಲ್ಲಿ ಮುಂಚೂಣಿಯತ್ತ ದಾಪುಗಾಲು

ಬೆಂಗಳೂರು, ಏಪ್ರಿಲ್ 02, 2018: ಭಾರತದ ಟ್ರಾಕ್ಟರ್ ತಯಾರಿಕಾ ಕ್ಷೇತ್ರದಲ್ಲಿ ದಾಪುಗಾಲು ಇಡುತ್ತಿರುವ ಮತ್ತು ಸಾಲಮುಕ್ತ ಬ್ರಾಂಡ್ ಆಗಿರುವ ಸೊನಾಲಿಕಾ ಇಂಟರ್‌ನ್ಯಾಷನಲ್ ಟ್ರಾಕ್ಟರ್ಸ್ ಲಿಮಿಟೆಡ್(ಐಟಿಎಲ್)ನ ಹೊಶಿಯಾಪುರದಲ್ಲಿ ವಿಶ್ವದ ಸಮಗ್ರ ಮತ್ತು ಅತಿದೊಡ್ಡ ಟ್ರಾಕ್ಟರ್ ತಯಾರಿಕಾ ಘಟಕವನ್ನು ಆರಂಭಿಸಿದ್ದು, ಇಲ್ಲಿ ಉತ್ಪಾದನೆಯಾದ ಒಟ್ಟು 1 ಲಕ್ಷ ಟ್ರಾಕ್ಟರ್‌ಗಳನ್ನು ಒಂದೇ ವರ್ಷದಲ್ಲಿ ಮಾರಾಟ ಮಾಡಿದ ಹೊಸ ದಾಖಲೆಯನ್ನು ಬರೆದಿದೆ. ಈ ಮೂಲಕ ಕಂಪನಿ ಶೇ.22 ರಷ್ಟು ಪ್ರಗತಿಯನ್ನು ಸಾಧಿಸಿದೆ.

2018 ನೇ ಸಾಲಿನ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯು ಶೇ.56 ರಷ್ಟು ಪ್ರಗತಿಯನ್ನು ಕಂಡಿದೆ. ಮಾರ್ಚ್ ತಿಂಗಳೊಂದರಲ್ಲಿಯೇ ಕಂಪನಿಯು ಗಣನೀಯ ಸಾಧನೆ ಮಾಡಿದ್ದು, 12,791 ಟ್ರಾಕ್ಟರ್‌ಗಳನ್ನು ಮಾರಾಟ ಮಾಡುವ ಮೂಲಕ ಶೇ.80 ರಷ್ಟು ದಾಖಲೆ ಪ್ರಮಾಣದ ಪ್ರಗತಿಯನ್ನು ಸಾಧಿಸಿದೆ.

| 2017–18 ರ ಸಾಧನೆ | |
|---|---|
| 2018 ರಲ್ಲಿ ಒಟ್ಟು ಟ್ರಾಕ್ಟರ್ ಮಾರಾಟ | 1,00,001 |
| 4 ನೇ ತ್ರೈಮಾಸಿಕದ ಪ್ರಗತಿ | ಶೇ.56 |

**ಈ ಸಾಧನೆ ಬಗ್ಗೆ ಮಾಹಿತಿ ನೀಡಿದ ಸೊನಾಲಿಕಾ ಐಟಿಎಲ್‌ನ ಕಾರ್ಯಕಾರಿ ನಿರ್ದೇಶಕ ರಾಮನ್ ಮಿತ್ತಲ್** ಅವರು, "2013 ರ ಹಣಕಾಸು ಸಾಲಿನಲ್ಲಿ ನಾವು 50,583 ಟ್ರಾಕ್ಟರ್‌ಗಳನ್ನು ಮಾರಾಟ ಮಾಡಿದ್ದೆವು. ಆಗಲೇ ನಾವು 2018 ರ ಸಾಲಿನ ವೇಳೆಗೆ 1 ಲಕ್ಷ ಟ್ರಾಕ್ಟರ್‌ಗಳನ್ನು ಮಾರಾಟ ಮಾಡಬೇಕೆಂಬ ಗುರಿಯನ್ನು ಹಾಕಿಕೊಂಡಿದ್ದೆವು. ಇದೀಗ 2018 ನೇ ಸಾಲಿನ ಅಂತ್ಯದಲ್ಲಿ 1,00,001 ಟ್ರಾಕ್ಟರ್‌ಗಳನ್ನು ಮಾರಾಟ ಮಾಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕನಸನ್ನು ಭಾರತದ ನಮ್ಮ ರೈತಾಪಿ ವರ್ಗ ಸಾಕಾರಗೊಳಿಸಿದೆ.

ನಾವು ಪ್ರತಿಯೊಂದು ರಾಜ್ಯಗಳಿಗೆ, ಅಲ್ಲಿನ ಮಣ್ಣಿನ ಗುಣಕ್ಕೆ ತಕ್ಕಂತೆ ಮತ್ತು ಬಹುಪಯೋಗಿ ಆಗುವಂತಹ ರೀತಿಯಲ್ಲಿ ಟ್ರಾಕ್ಟರ್‌ಗಳನ್ನು ತಯಾರಿಸುವಲ್ಲಿ ಗಮನಹರಿಸಿದ್ದೇವೆ. ಪಡ್ಲಿಂಗ್, ಆರ್ಚರ್ಡ್ ಫಾರ್ಮಿಂಗ್, ಆಲುಗೆಡ್ಡೆ ಕೃಷಿ, ರೊಟವೇಟರ್, ಬೇಸಾಯ ಸೇರಿದಂತೆ ಇನ್ನೂ ಹಲವಾರು ಕೃಷಿ ಚಟುವಟಿಕೆಗೆ ಅನುಕೂಲವಾಗುವ ರೀತಿಯಲ್ಲಿ ಟ್ರಾಕ್ಟರ್‌ಗಳನ್ನು ಅಭಿವೃದ್ಧಿಪಡಿಸಿದ್ದೇವೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ನಾವು 1000 ಕ್ಕೂ ಅಧಿಕ ವರ್ಗಗಳಲ್ಲಿ ಟ್ರಾಕ್ಟರ್ ಅನ್ನು ತಯಾರಿಸುತ್ತಿದ್ದೇವೆ. ನಮ್ಮ ಈ ಟ್ರಾಕ್ಟರ್ 20 ರಿಂದ 120 ಎಚ್‌ಪಿ ಸಾಮರ್ಥ್ಯಗಳನ್ನು ಹೊಂದಿದ್ದು, ರೈತರಿಗೆ ಅಗತ್ಯಕ್ಕೆ ತಕ್ಕಂತೆ ಸುಲಭವಾಗಿ ಉಪಯೋಗಿಸಬಹುದಾಗಿದೆ” ಎಂದು ಅಭಿಪ್ರಾಯಪಟ್ಟರು.